ರೋಟರಿ ಮೈಸೂರು ಮಿಡ್‌ಟೌನ್
Rotary
Mysore Midtown
Club No. 15742 RI Dist. 3181

# ABOUT US

Issue: 37 Volume: 45 11.03.2026 Pages: 04

## Baandhavya - 2026





Baandhavya, the flagship event of Rotary Mysore Midtown, was a massive hit! Over 500 children from 15+ schools participated, making it a vibrant and energetic affair. The event kicked off early at 7:00 a.m. with students arriving from various schools, accompanied by teachers and parents. The Oval grounds were transformed into a festive zone, with a stage, stalls offering delicious eateries, and shamiyana shades for breakfast and lunch. The atmosphere was electric, with the band set from Rotary Midtown Academy, NCC cadets, and volunteers from RMA adding to the excitement.





The inauguration was a highlight, with District 3192 Governor Elect Rtn Ravishankar Dakoju inspiring the crowd with his simplicity and vision. The event featured track and field activities, games conducted by SACADA, and special participation of God's own children.The valedictory ceremony was a grand finale, with Gilli Nata enthralling the kids, anchored by Ann Chaitra Mohan. The entire Midtown team, led by Chairman Rtn Veeresh HS and Co-Chairman Rtn Dr Kumar P, ably supported by President Rakesh Babu and Secretary Bhaskar Sainik, worked tirelessly to make it a success. Food, fun, and frolic were well taken care of, making Bandhavya a memorable experience for all! "

**Rtn. Mohan Kumar T N**






















## ದೇವರ ಮಕ್ಕಳು ಮತ್ತು ಅವರ ಭಿನ್ನ ಸಾಮರ್ಥ್ಯ

ಭಿನ್ನ ಎನ್ನುವ ಪದವೇ ಸ್ವಲ ಭಿನ್ನವಾಗಿದೆ. ಇದು ಹೇಗೆ, ಯಾವ ವಿಚಾರ ಎನ್ನುವ ಬಗ್ಗೆ ಎಲ್ಲರಲ್ಲೂ ಯೋಚನೆ ಶುರುವಾಗುತ್ತೆ. ಅದು ಹಿಂಗು ಇರಬಹುದು ಹಂಗು ಇರಬಹುದು. ಆದರೆ ವಿಶೇಷ ಮಕ್ಕಳ ವಿಚಾರಕ್ಕೆ ಬಂದಾಗ ಅದು ಹೇಗೇಗೋ ಭಿನ್ನವಾಗಿದೆ. ಒಬ್ಬೊಬ್ಬರದು ಒಂದೊಂದು ರೀತಿ. ಬುದ್ದಿ ಶಕ್ತಿ ಕಮ್ಮಿ, ತಿಳುವಳಿಕೆ ಕಮ್ಮಿ, ಅರೋಗ್ಯ ಶಕ್ತಿ ಕಮ್ಮಿ ಹಾಗೂ ಬೆಳವಣಿಗೆ ಕಮ್ಮಿ. ಅದು ಯಾಕೆ ಹೀಗೆ ಭಿನ್ನ ಎನ್ನುವುದು ಆ ದೇವನೇ ಬಲ್ಲ. ಆದರೆ ಸಾಮರ್ಥ್ಯಕ್ಕೇನು ಕಮ್ಮಿ ಇಲ್ಲ.

ಏನೇ ಇರಲಿ ಈ ಮಕ್ಕಳ ಭಿನ್ನವೇ ಚೆಂದ, ಈ ಮಕ್ಕಳ ಅಂದವೇ ಚೆಂದ. ಅವರ ನಡವಳಿಕೆಯೇ ಆನಂದ. ಇನ್ನು ಮಿಗಿಲಾಗಿ ಅವರ ಹೆತ್ತವರಿಗೆ ಪರಮಾನಂದ. ಅದರಲ್ಲೂ ಅವರ ನೋಡಿಕೊಳ್ಳುವ ತಾಯಂದಿರಿಗಂತೂ ಏನು ಸಾದಿಸಿದ ಸಂತೋಷ.

ಮಿಡ್ಟೌನ್ ಬಾಂಧವ್ಯ ಇಂತಹ ಮಕ್ಕಳಿಗೆ ಸುಮಾರು 20 ವರುಷಗಳಿಂದ ಅವರು ತಮ್ಮ ಎಲ್ಲವನ್ನು ಸಾದಿಸಿ ತೋರಿಸುವ ವೇದಿಕೆ ಕಲ್ಪಿಸಿದೆ. ಅವರಿಗೆ ಸಂತೋಷ ಕಲ್ಪಿಸುವ ಅವಕಾಶ ಹಾಗೂ ಪ್ರತಿಭೆ ತೋರಲು ಒಂದು ದೊಡ್ಡ ಸದವಕಾಶ ಕಲ್ಪಿಸಿದೆ. ಏನು ಋಣಾನುಬಂದವೋ ತಿಳಿಯದು. ನಮ್ಮ ಮಿಡ್ಟೌನ್ ಹಿರಿಯರು ಶುರು ಮಾಡಿರುವ ಕಾರ್ಯವನ್ನು ಈಗಿನವರು ಮುಂದುವರಿಸುತ್ತಿದ್ದಾರೆ. ವಿಶೇಷ ಅಂದರೆ, ಬೇರೆ ಯಾವ ರೋಟರಿ ಸಂಸ್ಥೆ ಮಾಡದೆ ಇರುವುದನ್ನು, ಮಿಡ್ಟೌನ್ ಮಾಡುತ್ತಿದೆ.

ನನಗೆ ಈ ದೇವರ ಮಕ್ಕಳ ಬಗ್ಗೆ ಏನು ತಿಳಿಯದೆ, ಮಿಡ್ಟೌನ್ ಸೇರಿದ ನಂತರ ಎಲ್ಲರೊಟ್ಟಿಗೆ ಕೂಡಿ ಆಡಿ ಸ್ವಲ್ಪ ಮಟ್ಟಿಗೆ ಬಾಂಧವ್ಯದ ಬೆಸುಗೆ ಸುಮಾರು ವರುಷಗಳಿಂದ ಅಚಿಟಿದೆ.

ಇಂತಹ ಅಂಟಿದ ಬೆಸುಗೆ ದೂರಾಗುವುದು ಕಷ್ಟ. ಅದುವೇ ಸಮಾಜಕ್ಕೆ ಏನಾದರು ಕೊಡಲು ಮನಸು ತುಡಿಯುತ್ತಿರುವಾಗ ಭಿನ್ನ ಸಾಮರ್ಥ್ಯದ ಮಕ್ಕಳಿಗೆ ಏನೋ ಮಾಡಬೇಕೆಂದು ಬಯಕೆ. ಅದರಲ್ಲೂ ಮಿಡ್ಟೌನ್ ಬಾಂಧವ್ಯ ನಡೆಸುವ ಶೈಲಿಯೇ ಚೆಂದ. ವರುಷ ವರುಷ ಏನಾದರು ಹೊಸತು ಕೊಡಬೇಕೆಂಬುದು ಎಲ್ಲರ ತುಡಿತ.

ಈ ವರುಷದ ಬಾಂಧವ್ಯ ಅಂತೂ ಇನ್ನು ಸ್ವಲ್ಪ್ ಸಾಹಸಮಯವಾಗಿತ್ತು. ಮೊದಲಿಗೆ ಮಾಡುವುದೋ ಬೇಡವೋ ಎಂದು. ನಂತರ ಹೇಗೆ ಹಣ ಜೋಡಿಸುವುದು. ಅಷ್ಟರಲ್ಲಿ ನಾವು ಮಾಮೂಲಿಯಾಗಿ ನಡೆಸುವ ಸಮಯ ಮೀರಿತ್ತು . ನಂತರದ ಪ್ರಯತ್ನ ನಾಯಕ ಯಾರು. ಅತಿಥಿ ಯಾರು. ಕೊನೆಗೆ ಎಲ್ಲ ಎಡರು ತೊಡರು ಮೀರಿ ಮಾರ್ಚ್ 1ಕ್ಕೆ ಮಿಡ್ಟೌನ್ ಅಧ್ಯಕ್ಷರ ಹುಟ್ಟುಹಬ್ಬದಂದು ಎಂದು ದಿನಾಂಕ ನಿಗದಿಯಾಯಿತು . ರೋ. ವೀರೇಶ್ ನಾಯಕನಾಗಿ ಎಲ್ಲರ ಸಹಕಾರದಿಂದ ಕಾರ್ಯಕ್ರಮವನ್ನು ನಡೆಸಿದರು. ಎಲ್ಲವು ಬೇರೆಲ್ಲಾ ವರುಷದಂತೆ ಅಲ್ಲದೆ ಭಿನ್ನವಾಗಿ ಅಚ್ಚುಕಟ್ಟಾಗಿ ನಡೆಯಿತು.

ಬಂದು ಭಾಗವಹಿಸಿದ ಎಲ್ಲ ಮಕ್ಕಳು ಭಿನ್ನ. ಮಕ್ಕಳ ನಡತೆ ಭಿನ್ನ, ಅವರ ನಗು ಭಿನ್ನ, ಶೈಲಿ ಭಿನ್ನ, ಬುದ್ದಿ ಮತೆ ಭಿನ್ನ, ಅವರ ಪ್ರೀತಿ ಇನ್ನು ಭಿನ್ನ, ಅವರ ಕುಟುಂಬ ಮಕ್ಕಳ ಮೇಲೆ ತೋರುವ ಆಸಕ್ತಿ ಭಿನ್ನ, ಅವರ ಪ್ರೀತಿ ಅಪ್ಪುಗೆ ಎಲ್ಲವು ಭಿನ್ನ. ಅವರ ಸಾಮರ್ಥ್ಯ ಇನ್ನು ಭಿನ್ನ. ದೇವರ ಮಕ್ಕಳು ಕಪಟ, ಮೋಸ, ವಂಚನೆ ಅರಿಯದೆ ನಮೆಲ್ಲರಿಗಿಂತ ಬಹಳ ಭಿನ್ನ, ಬಹಳ ಚೆನ್ನ.

ಭಗವಂತ ನಮಗೆ ಬುದ್ದಿ, ಯೋಚನಾ ಶಕ್ತಿ ಕೊಟ್ಟು ಹಾಗೆಯೇ ಬೇಡದ ಎಲ್ಲವನ್ನು ಇಟ್ಟ. ದೇವರ ಮಕ್ಕಳು ಎಲ್ಲದರಲ್ಲೂ ಶುದ್ಧ, ಪರಿಶುದ್ಧ. ಭಗವಂತ ಎಲ್ಲ ಒಳ್ಳೆಯದನ್ನು ಅವರಿಗೆ ಕೊಟ್ಟ.

ಕೆಲವು ಮಕ್ಕಳು ಹಾಗೂ ಅವರ ಪೋಷಕರ ನಡುವಿನ ಬಾಂಧವ್ಯ ಪ್ರೀತಿ ಬೇರೆ ಯಾವ ಸಾಮಾನ್ಯ ಕುಟುಂಬಕ್ಕಿಂತ ಬಹಳ ನಿಷ್ಕಳಂಕ. ನಂಜನಗೂಡಿನಲ್ಲಿ ಬೆಳೆದ ಶ್ರೀಮತಿ ರೇಖಾ ತನ್ನ ಜೀವನ ರೂಪಿಸಿಕೊಳ್ಳಲು ವೈನಾಡ್ನಲ್ಲಿ ತನ್ನ ಬಾಳ ಸಂಗತಿಯನ್ನು ವರಿಸುತ್ತಾರೆ ಸುಮಾರು 12 ವರುಷದ ಹಿಂದೆ. ಒಳ್ಳೆಯ ಪತಿ, ಒಳ್ಳೆಯ ಊರು, ತೋಟದ ಮನೆ, ಆಳು ಕಾಳು ಕೆಲಸ ಎಲ್ಲವು ಸರಿ ಇತ್ತು. ಎಲ್ಲವು ಸರಿಯಾಗಿ ಹೀಗೇ ಇರಲಿ ಎಂದು ಭಗವಂತ ಹರಿಸಲು ಹೇಗೆ ಸಾಧ್ಯ. ಅಲ್ಲೇನಾದರೂ ಭಿನ್ನ ಬೇಡವೇ. ಅವರಿಗೆ ಒಬ್ಬ ಸುಂದರ ಸುಪುತ್ರ ಸಚಿನ್ ಹುಟ್ಟುತ್ತಾನೆ. ಈಗ ಅವನಿಗೆ ಸುಮಾರು 10 ವರುಷ. ಅವನು ದೇವರ ಪುತ್ರ. ನಿಷ್ಕಳಂಕ. ಸುಂದರವಾಗಿ, ಬುದ್ದಿವಂತನಾಗಿ ಬೆಳೆಯುತ್ತಿದ್ದಾನೆ. ವಯಸ್ಸಿಗಿಂತ ಒಂದು ನಾಲ್ಕು ವರುಷ ಚಿಕ್ಕವಾನಾಗಿ ತನ್ನ ಎಲ್ಲ ಚಟುವಟಿಕೆಯಲ್ಲಿ ಭಾಗವಹಿಸುತ್ತಾನೆ. ಸೊಂಟದಿಂದ ಕೆಳ ಭಾಗ ಸ್ವಲ್ಪ ನಿಶಕ್ತಿ ಇದ್ದು ನಡೆಯಲು ಶ್ರಮಿಸುತ್ತಾನೆ. ಭಿನ್ನ ಸಾಮರ್ಥ್ಯದಿಂದ ಎಲ್ಲ ಗ್ರಹಿಸುತ್ತಾನೆ. ಅಮ್ಮ ಮಗನ ಬಾಂಧವ್ಯ ಅವರ ಪ್ರೀತಿ ಸಾಮಾನ್ಯ ಪೋಷಕರಿಗಿಂತ ಭಿನ್ನವಾಗಿತು. ಏನೋ ಬೆಸುಗೆ. ಏನೋ ಸಂತೋಷ ಹಾಗೆಯೇ ಏನೋ ಶಕ್ತಿ. ಅಪ್ಪ ವೈನಾಡ್ ಊರಿನಲ್ಲಿ ಹಾಗೂ ಉದ್ಯೋಗ ನಿಮಿತ್ತ. ತಾಯಿ ಹಾಗೂ ಸಚಿನ್ ಮೈಸೂರಿನಲ್ಲಿ ಚಿಕಿತ್ಸೆ ಹಾಗೂ ತರಬೇತಿಗಾಗಿ. ಆ ತಾಯಿಯ ಸುಖ ಸಂತೋಷ ಸಂಭಾಷಣೆ ಎಲ್ಲವು ಮಗನೆ. ತನ್ನ ಪ್ರಪಂಚವೇ ಮಗ. ಅಲ್ಲೂ ಎಲ್ಲವು ಭಿನ್ನ. ತಾನು ಊಹೆ ಮಾಡದೆ ದೇವರು ಕರುಣಿಸಿದನ್ನು ಕಾಪಾಡುವುದು ಬೆಳೆಸುವುದೇ ಅವರ ಜೀವನ. ಎಂಥಹ ಭಿನ್ನ ಇವರ ಜೀವನ, ಎಂತಹ ತ್ಯಾಗ. ಅವರು ಎಲ್ಲದರಲ್ಲೂ ಭಿನ್ನ. ಎಲ್ಲ ವರುಷವು ನಮಗೆ ಒಂದೊಂದು ಭಿನ್ನವಾದ ಸಂಬಂಧ ಪ್ರೀತಿ ಬಾಂಧವ್ಯ ಕಾಣ ಸಿಗುತ್ತೆ. ಸಚಿನ್ ಹಾಗೂ ತಾಯಿ ರೇಖಾ ಪ್ರೀತಿ ವಾತ್ಸಲ್ಯ ನೋಡಿ ಸ್ವಲ್ಪ ಗಟ್ಟಿ ಇರುವ ನನ್ನ ಮನಸು ಚೂರ್ ಎಂದಿತು.

ಕಣ್ಣಂಚಿನಲಿ ಸ್ವಲ್ಪ ನೀರಿತ್ತು. ಮನಸಿನಲ್ಲಿ ಏನೋ ಮಾಡಿದ ಸಾರ್ಥಕತೆ ಇತ್ತು. ಮಿಡ್ಟೌನ್ ಬಿಟ್ಟು ಎಲ್ಲಿ ಈ ಜೀವನ ನೋಡಲು ಸಾಧ್ಯವಾಗುತಿತ್ತೋ ಆ ದೇವನೇ ಬಲ್ಲ. ಹೋಗಲಿ ಈ ಜೀವನ ನಾನು ಹೀಗೆ ನೋಡಲು ನನಗ್ಯಾಕೆ ಅನುಗ್ರಹಿಸಿದನೋ ನಾ ಅರಿಯೆ. ಅವನ ಯೋಚನೆಯು ಭಿನ್ನ.

ಕೊನೆಗೆ ಗಿಲ್ಲಿ ನಟ ಬಂದಾಗ ಅವನನ್ನು ನೋಡಲು ಸಚಿನ್ ಕುಂಟುತ್ತಾ ಹತ್ತಿರ ಬಂದು ಚಪ್ಪಾಳೆ ಹೊಡಿಯುವಾಗ ಮನಸು ಎಷ್ಟೋ ಹಗುರವಾಯಿತು. ದೇವರ ಮಕ್ಕಳು ಎಲ್ಲದರಲ್ಲೂ ಭಿನ್ನ. ಯಾವ ನಕರಾತ್ಮಕ ಯೋಚನೆ ಇಲ್ಲದೆ,ನಿಷ್ಕಲ್ಮಶ ಮನಸು ಇರುವ ದೇವರ ಮಕ್ಕಳ ಸಣ್ಣ ಒಂದು ಕಾರ್ಯಕ್ಕೆ ಬಾಗಿಯಾಗಿರುವ ನಾವೆಲ್ಲರೂ ಪುಣ್ಯವಂತರು. ಮುಂದೆಯೂ ಹೀಗೆಯೇ ಆ ದೇವರ ಮಕ್ಕಳ ಸೇವೆ ಮುಂದುವರಿಸುವ, ಬನ್ನಿ ಎಲ್ಲರೂ ಜೊತೆಗೂಡಿ. ಆ ಮಕ್ಕಳಿಗೆ ಭಿನ್ನವಾಗಿ ಕಾರ್ಯಕ್ರಮ ಆಯೋಜಿಸಿ ಅವರ ವಿಶೇಷ ಸಾಮರ್ಥ್ಯವನ್ನು ಪ್ರಪಂಚಕ್ಕೆ ಸಾರುವ.


ಸರ್ವೇ ಜನಃ ಸುಖಿನೋ ಭವಂತು!!






**ರೊ. ಎ.ಎನ್. ಅಯ್ಯಣ್ಣ**










## Next Week in Midtown






**Rtn. Francesco Arezzo**
President - Rotary International



**Rtn. Ramkrishna P K**
District Governor RI-3181



**Rtn. Rakesh Babu K L**
President 2025-26



**Rtn. Bhaskar Sainik**
Hon. Secretary 2025-26



**Rtn. Sulaiman Sait**
Editor 2025-26

**Printed at:**
Rotary Secretariat
Rotary Center, JLB Road, Mysuru

**Aboutus In-house Magazine published by**
Rtn. Bhaskar Sainik, Hon. Secretary
Rotary Mysore Midtown, JLB Road, Mysuru-570 024

**Editorial Board:** Rtn. Sulaiman Sait
Rtn. Aiyanna A N, Rtn. Dr. Chaithra S
Rtn. Dr. Manu Prasad S